# ಭಾಷಾ ಶಿಕ್ಷಣದಲ್ಲಿ ಸಾಹಿತ್ಯದ ಪಾತ್ರ

ಸುಕನ್ಯಾ ಅಪ್ಪಾರಾಯ ಗೋಂದಳಿ

ಬಿ. ಎ. ಮೂರನೇ ಸೆಮಿಸ್ಟರ್, ಎಸ್.ಎಸ್.ಎಮ್.ಎಸ್. ಕಾಲೇಜು, ಅಥಣಿ.

DOI: https://doi.org/10.5281/zenodo.17255131

## ABSTRACT:

ವಿವಿಧ ಹಂತದ ಭಾಷಾ ಶಿಕ್ಷಣದಲ್ಲಿ ಸಾಹಿತ್ಯ ಕೃತಿಗಳ ಅಳವಡಿಕೆಯಾಗುತ್ತಿದೆ. ಭಾಷಾ ಶಿಕ್ಷಣದಲ್ಲಿ ಸಾಹಿತ್ಯದ ಬಳಕೆ ಬೇಕೇ ಬೇಡವೇ ಎಂಬ ಜಿಜ್ಞಾಸೆಗೆ ಕೆಲವು ದೃಷ್ಟಿಕೋನಗಳು ಸಮರ್ಥನೆ ಒದಗಿಸಬಲ್ಲವು. ಒಂದು ಮಗುವಿನಿಂದ ಹಿಡಿದು ಒಬ್ಬ ಪ್ರಬುದ್ಧ ವ್ಯಕ್ತಿಯವರೆಗೆ ಬದುಕಿನ ಈ ಪ್ರಪಂಚದ ಎಲ್ಲಾ ಅನುಭವಗಳನ್ನು ಅರ್ಥೈಸಿಕೊಳ್ಳಲು ಇರುವ ಮಾಧ್ಯಮ ಭಾಷೆ. ಭಾಷೆ ಶಿಕ್ಷಣದ ಕಲಿಕೆಯ ತಳಪಾಯ ಎನ್ನುವುದಾದರೆ ಭಾಷೆಯನ್ನು ಕಲಿಯುವ ಪರಿಣಾಮಕಾರಿ ವಿಧಾನಗಳು ಹಾಗೂ ತಂತ್ರಗಳೇನು? ತಂತ್ರಗಳಲ್ಲಿ ಸಾಹಿತ್ಯವು ಒಂದು ಪ್ರಧಾನ ಅಂಶವನ್ನು ಹೊಂದಿದೆಯೇ? ಒಟ್ಟಿನಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಶಿಕ್ಷಣದಲ್ಲಿ ಹಾಗೂ ಅದರ ಅವಿಭಾಜ್ಯ ಅಂಗವಾದ ಭಾಷಾ ಕಲಿಕೆಯಲ್ಲಿ ಸಾಹಿತ್ಯಕ್ಕೆ ಇರುವ ಸ್ಥಾನವನ್ನು ರಾಷ್ಟ್ರೀಯ ಪಠ್ಯಕ್ರಮ 2005ರಲ್ಲಿ ಪ್ರಸ್ತಾಪಗಳು ಮುನ್ನಲೆಗೆ ತರುತ್ತವೆ.

## KEYWORDS:

ಸಾಹಿತ್ಯ, ಜಿಜ್ಞಾಸೆ, ಮಾಧ್ಯಮ, ಅವಿಭಾಜ್ಯ, ತಂತ್ರಜ್ಞಾನ, ತಳಪಾಯ, ಶಿಕ್ಷಣ.

### ಭಾಷಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಾಹಿತ್ಯದ ಪಾತ್ರ:

ಭಾಷೆಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಾಹಿತ್ಯದ ಮಹತ್ವವಿದೆ. ಪಠ್ಯಕ್ರಮದಲ್ಲಿ ಸಾಹಿತ್ಯವನ್ನು ಸೇರಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ದೈಹಿಕ, ಮಾನಸಿಕ ಹಾಗೂ ಸಾಂಸ್ಕೃತಿಕ ಅನುಭವಗಳನ್ನು ನೀಡುತ್ತದೆ. ಕನ್ನಡ ಸಾಹಿತ್ಯದ ಪ್ರಭಾವ, ಕನ್ನಡದ ಪ್ರಾಚೀನತೆ ಮತ್ತು ಆಧುನಿಕ ಸಾಹಿತ್ಯ ಕನ್ನಡ ಭಾಷೆಯ ಮೂಲಭೂತ ಅಂಶಗಳ ಮೇಲೆ ಹೇಗೆ ಪ್ರತಿಬಿಂಬಿಸುತ್ತವೆ. ಕನ್ನಡ ಸಾಹಿತ್ಯ, ಪ್ರಮುಖ ಸಾಹಿತಿಗಳು ಮತ್ತು ಸಾಹಿತ್ಯ ಶೈಲಿಗಳು ದ.ರಾ.ಬೇಂದ್ರೆ, ಕುವೆಂಪು, ಶಿವರಾಮ ಕಾರಂತರ ಸಾಹಿತ್ಯ ಪ್ರಭಾವವನ್ನು ಗಮನಿಸಬಹುದು.

### ಪಠ್ಯಕ್ರಮದಲ್ಲಿ ಕನ್ನಡ ಸಾಹಿತ್ಯವನ್ನು ಹೇಗೆ ಬಳಸಬಹುದು?

ಕಾವ್ಯ, ಕಥೆ, ನಾಟಕ, ಪ್ರಬಂಧ ಇತ್ಯಾದಿ ಶೈಲಿಗಳ ಸಾಹಿತ್ಯ ರೂಪಗಳು ಪಠ್ಯಕ್ರಮದಲ್ಲಿ ಒಳಪಡುವುದರಿಂದ ಈ ಎಲ್ಲ ಪ್ರಕಾರಗಳ ಸಮನ್ವಯ ಬಳಸಿ ಭಾಷಾ

ಕೌಶಲ್ಯ ಬೆಳೆಸಬಹುದು. ನಮ್ಮ ಸಂಸ್ಕೃತಿ, ಆಚಾರ, ತತ್ವ, ವಿಚಾರ, ನೈತಿಕ, ಸಾಮಾಜಿಕ ವಿಚಾರಗಳನ್ನು ವಿದ್ಯಾರ್ಥಿಗೆ ಪರಿಚಯಿಸಲು ಈ ಸಾಹಿತ್ಯದ ಆಯ್ಕೆ ಪ್ರಮುಖವಾಗಿದೆ.

**ಕನ್ನಡ ನವೀಕರಣ ಮತ್ತು ಪ್ರಾದೇಶಿಕ ಸಾಹಿತ್ಯ:**

**ಭಾಷಾ ವೈವಿಧ್ಯತೆ:**

ಕನ್ನಡ ಪ್ರಾದೇಶಿಕ ಭಾಷೆಗಳ ಮೂಲಕ ಸಾಹಿತ್ಯವನ್ನು ಪರಿಚಯಿಸುವುದರಿಂದ ಆ ಪ್ರದೇಶದ ಸಂಸ್ಕೃತಿಯ ಹಾಗೂ ಭಾಷೆಯ ಅರಿವನ್ನು ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಸಬಹುದು. ಪ್ರಾದೇಶಿಕ ಸಾಹಿತ್ಯ ಅಧ್ಯಯನವು ವಿಶೇಷವಾಗಿ 'ಡಯಲೆಕ್ಟ್ಸ್ ಅಂಡ್ ವೇರಿಯೇಷನ್ಸ್' ಅನ್ನು ಹತ್ತಿರದಿಂದ ಅನ್ವಯಿಸುತ್ತದೆ. ನೂತನ ಮಾರ್ಗಗಳಾಗಿ ಈ ಸಾಹಿತ್ಯದ ಡಿಜಿಟಲ್ ಮಾಧ್ಯಮಗಳಾದ ಇಪುಸ್ತಕ, ಆಡಿಯೋ ಪುಸ್ತಕಗಳು, ಡಿಜಿಟಲ್ ಫಾರಂಗಳ ಬಳಕೆಯ ಮೂಲಕ ಕನ್ನಡ ಸಾಹಿತ್ಯ ತಲುಪಿಸಲು ಸಾಧ್ಯವಿದೆ.

**ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ಅನುಭವ:**

ಕಥೆ, ಕವನ, ನಾಟಕಗಳು ಓದುವುದರಿಂದ ಆ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಕಲೆ ಬೆಳೆಯುತ್ತದೆ. ಸಾಹಿತ್ಯವು ಮನುಷ್ಯನ ಒಳಗಿನ ಭಾವನೆ ಹೊರಹಾಕಲು ಸಹಾಯ ಮಾಡುತ್ತದೆ.

**ಸಾಹಿತ್ಯದಲ್ಲಿ ಪಠ್ಯಗಳ ಆಯ್ಕೆ:**

ಭಾಷಾ ಶಿಕ್ಷಣದ ಹಂತಗಳಲ್ಲಿ ಯಾವ ಯಾವ ಸಾಹಿತ್ಯಕ ಪಠ್ಯಗಳನ್ನು ಬೋಧನೆಗೆ ಅಳವಡಿಸಬೇಕು ಎನ್ನುವುದು ಪ್ರಶ್ನೆ ಕಾಡುತ್ತದೆ. ಸಾಮಾನ್ಯವಾಗಿ ಇದಕ್ಕೆ ಉತ್ತರ ಸುಲಭವಾಗಿದೆ. ಶಿಶುವಿಹಾರ ಹಂತದಿಂದ ಕಾಲೇಜಿನ ಹಂತದವರೆಗೆ ಸೂಕ್ತವಾದ ಪಠ್ಯಗಳನ್ನು ಆಯ್ಕೆ ಮಾಡಬಹುದು. ಸೂಫಿ ಕಥೆಗಳು, ಪಂಚತಂತ್ರ, ರಾಮಾಯಣ, ಮಹಾಭಾರತ, ಇಲಿಯಡ್ ಮತ್ತು ಒಡಿಸ್ಸಿ, ಭಾರತೀಯ ಹಾಗೂ ಪಾಶ್ಚಾತ್ಯ ಕಾವ್ಯಗಳು, ಕಥಾನಕಗಳು ಹಾಗೂ ಶೇಕ್ಸ್‌ಪಿಯರ್ ನಾಟಕಗಳು, ಕುವೆಂಪು, ಕಾರಂತ, ತೇಜಸ್ವಿ, ಮುಂತಾದ ಲೇಖಕರ ಕಾದಂಬರಿಗಳು, ಕುಮಾರವ್ಯಾಸ, ಕನಕದಾಸ, ಶಿವರುದ್ರಪ್ಪ, ನಿಸಾರ್ ಅಹಮದ್ ಮುಂತಾದ ಅನೇಕ ಕವಿಗಳು, ಪಿ.ಲಂಕೇಶ, ಶಿವಪ್ರಸಾದ ಮುಂತಾದವರ ನಾಟಕಗಳು, ಪ್ರವಾಸ ಸಾಹಿತ್ಯ ಇತ್ಯಾದಿಗಳನ್ನು ಅಳವಡಿಸಿಕೊಳ್ಳಬೇಕು. ಹೀಗೆ ವಿವಿಧ ಹಂತಗಳಿಗೆ ಸೂಕ್ತವಾಗುವ ಪಠ್ಯಗಳು ಲಭ್ಯವಿರುವುದರಿಂದ ಇದೊಂದು ಆಶಾದಾಯಕ ಸಂಗತಿಯಾಗಿದೆ. ಈ ಕಾರ್ಯವು ತಜ್ಞರು, ನುರಿತ ಶಿಕ್ಷಕರು, ಹಿರಿಯರ ನಿರ್ದೇಶನ ಮತ್ತು ಅಧ್ಯಾಪಕರ ಮಾರ್ಗದರ್ಶನದಲ್ಲಿ ಮಾತ್ರ ಸಾಧ್ಯವಾಗುವುದು. ಇಲ್ಲಿ ಕಲಿಕೆಯ ಯಾವ ಹಂತಗಳಲ್ಲಿ ಯಾವ ಸ್ವರೂಪದ ಸಾಹಿತ್ಯ ಪಠ್ಯಗಳನ್ನು ಬೋಧನೆಯಲ್ಲಿ ಅಳವಡಿಸಿಕೊಳ್ಳಬೇಕು

ಎಂಬುದು ತಜ್ಞರು ಚಿಂತಿಸಬೇಕಾದ ಸಂಗತಿಯಾಗಿದೆ. ಈ ಸಲಹೆಗಳು ಪ್ರಾಥಮಿಕ ಶಿಕ್ಷಣದ ಮಕ್ಕಳಲ್ಲಿ ಭಾಷೆಯ ಬಗೆಗೆ ಒಲವು ಮೂಡಿಸುತ್ತದೆ. ಪ್ರಾಸ, ಅನುಪ್ರಾಸ, ನಾದ ಗುಣಗಳಿಂದ, ಸುಲಭವಾಗಿ ಕಲಿಯಬಲ್ಲ ಸ್ವಾರಸ್ಯಕರ ಕಥೆಯ ಪದ್ಯಗಳನ್ನು ಮಕ್ಕಳ ಮನಸ್ಸಿಗೆ ಖುಷಿ ಕೊಡುವ ಹಾಗೂ ಆಸಕ್ತಿಪೂರ್ಣ ಗದ್ಯದ ಕಥೆಗಳನ್ನು ಪರಿಚಯಿಸಬಹುದು. ಪ್ರೌಢ ಹಂತಕ್ಕೆ ಬರುವ ಹೊತ್ತಿಗೆ ಕಾಳಿದಾಸ, ಶೇಕ್ಸ್‌ಪಿಯರ್, ಡಿಕ್ಕೆನ್ಸ್, ಕುವೆಂಪು, ಕಾರಂತರ ಕೆಲವು ಕೃತಿಗಳು ಹಾಗೂ ಸಮಾನವಾದ ಇತರ ಕೃತಿಗಳನ್ನು ಪರಿಚಯಿಸಬಹುದು. ಪದವಿ ಹಂತದಲ್ಲಿ ಸಮಾಜದಲ್ಲಿ ರೂಢಿಗತವಾಗಿರುವ ಮೌಲ್ಯಗಳನ್ನು ಪ್ರಶ್ನಿಸುವಂತಹ ಕೃತಿಗಳನ್ನು ಅಧ್ಯಯನ ಮಾಡಬಹುದು. ಸಂಕೀರ್ಣವಾದ ಚರ್ಚಾ ಸ್ಪರ್ಧೆ, ಸಾಹಿತ್ಯ ಕೃತಿಗಳ ಬಗೆಗೆ ವಿಮರ್ಶಾತ್ಮಕ ನಿಲುವು ತೆಗೆದುಕೊಳ್ಳಬೇಕಾದರೆ ವಿದ್ಯಾರ್ಥಿಗಳು ಪ್ರಬುದ್ಧ ಸ್ಥಿತಿ ತಲುಪಬೇಕಾಗುತ್ತದೆ.

**ಶಿಕ್ಷಕರ ಶಿಕ್ಷಣದಲ್ಲಿ ಸಾಹಿತ್ಯ:**

ಶಿಕ್ಷಕರ ತರಬೇತಿಯಲ್ಲಿ ಸಾಹಿತ್ಯದ ಅಧ್ಯಯನಕ್ಕೆ ವಿಶೇಷವಾದ ಒತ್ತು ನೀಡುವುದು ಸೂಕ್ತ ಎನ್ನುವುದು ಶಿಕ್ಷಕರ ಭಾವನೆ. ಈ ತರಬೇತಿ ಶಿಕ್ಷಕರನ್ನು ತಯಾರು ಮಾಡುವ ಡಿಪ್ಲೋಮಾ ಮತ್ತು ಪದವಿ ತರಗತಿಗಳಿಗೆ ಮಾತ್ರ ಸೀಮಿತವಲ್ಲ. ಕಾರ್ಯಾಗಾರ, ವಿಚಾರ ಸಂಕೀರ್ಣಗಳು, ಇತರರೊಂದಿಗೆ ದಿನನಿತ್ಯದ ಚರ್ಚೆ ಹೀಗೆ ಶಿಕ್ಷಕರ ವೃತ್ತಿ ನಿರತವಾಗಿರುವಾಗ ಭಾಗವಹಿಸುವಿಕೆಯಿಂದ ಶೈಕ್ಷಣಿಕ ಚಟುವಟಿಕೆಗಳಿಗೂ ವಿಸ್ತರಿಸುತ್ತದೆ. ವಿಶೇಷವಾಗಿ ಭಾಷಾ ಶಿಕ್ಷಣದಲ್ಲಿ ಸಾಹಿತ್ಯಕ್ಕೆ ಇರುವ ಪಾತ್ರದ ಕುರಿತಾದ ಅರಿವನ್ನು ಹೆಚ್ಚು ವಿಸ್ತರಿಸಬಹುದು. ಟ್ಯಾಗೂರ್ ಅವರು ಹೇಳುವಂತೆ ‘‘ನಾವು ನಮ್ಮ ಅತ್ಯಮೂಲ್ಯ ಸಂತಸವನ್ನು ಯಾವಾಗ ಸಾಧಿಸುತ್ತೇವೆ ಎಂದರೆ ನಾವು ನಮ್ಮನ್ನು ಇತರರ ಮೂಲಕ ಸಾಕ್ಷಾತ್ಕರಿಸಿಕೊಂಡಾಗ’’ ಈ ಮಾತು ನಮ್ಮ ವ್ಯಕ್ತಿ ಮತ್ತು ಸಂಸ್ಥೆಯ ನಡುವಿನ ಜಿಜ್ಞಾಸೆಗೆ ತೊಡಗಬಹುದು. ಇಲ್ಲಿ ಸೂಕ್ಷ್ಮವಾಗಿ ಹೇಳಬಹುದಾದ ಒಂದು ಮಾತೆಂದರೆ ನಾವು ಇತರರ ಮೂಲಕ ಭಾವನಾತ್ಮಕವಾಗಿ ಸಾಕ್ಷಾತ್ಕರಿಸಿಕೊಳ್ಳಬಹುದು. ಶಕ್ತಿಯುತ ಮಾಧ್ಯಮ ಎಂದರೆ ಸಾಹಿತ್ಯದ ಮೂಲಕವಾಗಿ ನಡೆಯುವ ಭಾಷಾ ಶಿಕ್ಷಣವು ಶಿಕ್ಷಣದ ರೂಪರೇಖೆಗಳು, ತಿಳುವಳಿಕೆ, ಗುರಿ, ಹಾಗೂ ಸಾಧ್ಯತೆಗಳಲ್ಲದೆ ಜೀವನದ ಅರ್ಥವನ್ನು ವಿಸ್ತರಿಸಲು ಸಾಧ್ಯ. ಭಾಷಾ ಶಿಕ್ಷಣದಲ್ಲಿ ಸಾಹಿತ್ಯ ಅಳವಡಿಸಿಕೊಳ್ಳುವುದರ ಬಗೆಗೆ ಒಲವು ಪುನಃ ಮೂಡುತ್ತಿದೆ. ಆದರೆ ಸಾಹಿತ್ಯವನ್ನು ಒಂದು ಉಪಕರಣವಾಗಿ, ತಂತ್ರವಾಗಿ ನೋಡಲಾಗುತ್ತಿರುವ ಬಗೆಗೆ ಸಂದೇಹ ಮೂಡುವುದು ಅಸಾಧ್ಯ. ಆದರೆ ಸಾಹಿತ್ಯದ ಓದಿನ ಗುರಿ ಸೀಮಿತವಾಗಿರಬಹುದು. ವಿಶೇಷವಾಗಿ ಭಾಷಾ ಶಿಕ್ಷಣವನ್ನು ನಾವು ಮೊದಲು ಹೇಳಿದ ಒಂದು ಸೀಮಿತ ಉಪಕರಣಾತ್ಮಕ ನೆಲೆಯಿಂದ ಬಿಡುಗಡೆ ಮಾಡಿ ಅದನ್ನು ಒಂದು ವಸ್ತುನಿಷ್ಠತೆಗೆ

ಕೊಂಡೊಯ್ಯಬಹುದು. ಇದು ಸಾಹಿತ್ಯದ ಬೋಧನೆ ಹಾಗೂ ಕಲಿಕೆಯಿಂದ ಸಾಧ್ಯ. ಭಾಷೆಯು ಕಲಿಕೆಗೆ ಹಾಗೂ ವ್ಯವಹಾರಿಕತೆ, ಉದ್ಯೋಗದ ಅವಕಾಶಗಳ ಆಚೆಗೆ ಬಹುರೂಪಿಯಾಗಿದೆ. ಆದುದರಿಂದ ಭಾಷಾ ಶಿಕ್ಷಣದಲ್ಲಿ ಸಾಹಿತ್ಯದ ಪಾತ್ರ ಕುರಿತಾದ ಚಿಂತನೆ ಮಹತ್ವಪೂರ್ಣವಾಗಿದೆ.

**ಭಾಷಾ ಕಲಿಕೆಗೆ ಹಾಗೂ ಶಿಕ್ಷಣದಲ್ಲಿ ಸಾಹಿತ್ಯದ ಪ್ರಯೋಜನಗಳು:**

ಸ್ಮರಣ ಶಕ್ತಿಯ ಬೆಳವಣಿಗೆ: ಯಾವುದೇ ವಿಷಯದ ಕಲಿಕೆಯು ಮಗುವಿನ ಸ್ಮರಣ ಶಕ್ತಿಯ ಬೆಳವಣಿಗೆಗೆ ಅತ್ಯಗತ್ಯ. ಸ್ಮರಣ ಶಕ್ತಿಯ ಜೊತೆಗೆ ಸರಿಯಾದ ಅರಿವಿನ ಅಗತ್ಯವಿದೆ. ಒಂದು ಸರಳ ಉದಾಹರಣೆಯೊಂದಿಗೆ, ಒಬ್ಬ ವಿದ್ಯಾರ್ಥಿಗೆ 'ನಿನಗೆ ಭಾರತದ ರಾಜಧಾನಿ ಯಾವುದು ಎಂದು ಗೊತ್ತೇ?' ಎಂದು ಕೇಳಿದಾಗ ಅವನು 'ನನಗೆ ಗೊತ್ತು' ಎನ್ನುತ್ತಾನೆ. 'ಯಾವುದು?' ಎಂದಾಗ 'ಅದು ನನಗೆ ಗೊತ್ತು, ಪುಸ್ತಕ ಕೊಟ್ಟರೆ ಹೇಳಬಲ್ಲೆ' ಎಂದರೆ ಆತನಿಗೆ ಪ್ರಶ್ನೆಗೆ ಉತ್ತರ ಗೊತ್ತಿಲ್ಲ ಎಂದು ತಿಳಿಯಬೇಕು. ಅಂದರೆ ಜ್ಞಾನ ಎನ್ನುವುದು ಸ್ಮರಣ ಶಕ್ತಿಯ ಜೊತೆಗೆ ತಳಕು ಹಾಕಿಕೊಂಡಿದೆ. ಸಾಹಿತ್ಯದ ಕಲಿಕೆ ಶಿಕ್ಷಣದಲ್ಲಿಯೇ ಒಂದು ಪಾತ್ರವಿದೆ. ಸ್ಮರಣ ಶಕ್ತಿಯ ಬೆಳವಣಿಗೆಯಲ್ಲಿ ಸಾಹಿತ್ಯಕ್ಕೆ ಮಹತ್ವಪೂರ್ಣ ಸ್ಥಾನವಿದೆ. ಸಾಹಿತ್ಯ ಎಂದರೆ ಕಲ್ಪನಾಶೀಲ ಅನುಭವಗಳನ್ನು ತನ್ನಡೆಗೆ ಗಮನ ಸೆಳೆಯುವುದು. ಇದು ಹೆಚ್ಚಾಗಿ ಒಳ್ಳೆಯ ಸಾಹಿತ್ಯ, ಕಾದಂಬರಿ, ನಾಟಕ ಮುಂತಾದ ಭಾಷೆಗಳಲ್ಲಿ ಮಹೋನ್ನತ ಸೌಂದರ್ಯದಲ್ಲಿ ಬಳಸಿಕೊಳ್ಳುತ್ತದೆ. ಸಾಹಿತ್ಯ ನಮ್ಮ ಭಾಷೆಯ ಬಗೆಗೆ ಪ್ರೀತಿ ಉಂಟು ಮಾಡುತ್ತದೆ. ಈ ಭಾಷಾ ಪ್ರೇಮದಲ್ಲಿ 'ಪಾತರಗಿತ್ತಿ ಪಕ್ಕ' ಕವನದ ಸಾಲುಗಳು ಉದಾಹರಣೆಗೆ ಗಮನಿಸಬಹುದು.

**"ಏನು ಬಣ್ಣ, ಏನು ಬಣ್ಣ**
**ನಡುವೆ ನವಿಲ ಗಣ್ಣ**
**ರೇಷ್ಮೆ ಪಕ್ಕ, ನಯ ಮುಟ್ಟಲಾರೆ ಭಯ"**

**ಸಾಹಿತ್ಯದ ಮೂಲಕ ಭಾಷೆಯ ಕಲಿಕೆ:**

ಸಾಹಿತ್ಯದ ಮೂಲಕ ಭಾಷೆಯ ಕಲಿಕೆಯ ಪ್ರಯತ್ನ ನಮ್ಮನ್ನು ಬೆರಗು ಮೂಡಿಸುವ ಆಯಾಮಗಳತ್ತ ಒಯ್ಯುತ್ತದೆ. ಇಂಗ್ಲಿಷ್ ರೋಮ್ಯಾಂಟಿಕ್ ಕಾವ್ಯಗಳಿಂದ ಪ್ರಭಾವಿತರಾದ ಕವಿ ಕುವೆಂಪು ಅವರ 'ಪಕ್ಷಿಕಾಶಿ' ಸಂಕಲನದ 'ಹಸಿರು' ಕವನದ ಸಾಲುಗಳು, 'ಹಸಿರಾದ ಹೆಸರು, ಮುಗಿಲು ಹಸಿರು, ಗದ್ದೆಯ ಬಯಲು, ಹಸಿರು ಮಳೆ, ಹಸಿರು ಕಣಿವೆ, ಹಸಿರು ಸಂಜೆ, ಈ ಬಿಸಿಲು' ಈ ಸಾಲುಗಳು ಸಾಹಿತ್ಯದ ಅರಿವು ಮತ್ತು ಹಸಿರಿನ ಬಗ್ಗೆ ಕವಿಗೆ ಇರುವ ಪ್ರೇಮ ಕಂಡುಬರುತ್ತದೆ. ಭಾಷಾ ಕಲಿಕೆಯಲ್ಲಿ ಸಹಾಯಕವಾಗುವ ಇತರ ಸಾಹಿತ್ಯ ಪ್ರಕಾರಗಳೆಂದರೆ ನಾಟಕ,

ಸಂಭಾಷಣಾ ವಿಧಾನ ಮುಂತಾದವುಗಳು.

**ಸೃಜನಶೀಲತೆಯ ಬೆಳವಣಿಗೆ:**

ಸಣ್ಣ ಕಥೆ, ಕಾದಂಬರಿ ಹಾಗೂ ಕಥನಗಳು ಮಕ್ಕಳಲ್ಲಿ ಸೃಜನಶೀಲತೆಯ ವಿನ್ಯಾಸ, ರಚನಾ ಮಾದರಿಯನ್ನು ಅವರ ಮನದಲ್ಲಿ ಮೂಡಿಸುತ್ತವೆ. ಹಾಗೂ ನಮ್ಮ ಸೃಜನಶೀಲತೆಯ ಬೆಳವಣಿಗೆಗೆ ಬಾಲ್ಯದಲ್ಲಿ ಕೇಳಿದ ಕಥೆಗಳನ್ನು, ಕಾವ್ಯವಾಚನವನ್ನು, ಬರವಣಿಗೆ ಹೇಗೆ ಪುಷ್ಟಿ ನೀಡಿತು ಎಂಬುದು ದಾಖಲಿಸುತ್ತದೆ. ಪ್ರಬಂಧವು ಸಾಹಿತ್ಯದ ಇನ್ನೊಂದು ಪ್ರಕಾರ. ಸಾಮಾನ್ಯವಾಗಿ ಒಂದು ವಿಷಯವನ್ನು ತೆಗೆದುಕೊಂಡು ಸ್ವಾರಸ್ಯಕರವಾಗಿ ಮಂಡಿಸುವ ಕಲೆ ಪ್ರಬಂಧವಾಗಿದೆ. ವಿಚಾರ ಸಾಹಿತ್ಯ ನಮ್ಮ ತಾರ್ಕಿಕ ಸಾಮರ್ಥ್ಯವನ್ನು, ಬದುಕಿನ ಅರಿವನ್ನು ಮೂಡಿಸುತ್ತದೆ. ಸಾಹಿತ್ಯ ಪರಿಮಿತ ಶಕ್ತಿಗಳನ್ನು ಸ್ಫೋಟಿಸಿ ಹೇಳುತ್ತದೆ.

**ಸಾಹಿತ್ಯದಿಂದ ಸಾಂಸ್ಕೃತಿಕ ಅರಿವು:**

ಭಾಷೆ ಎನ್ನುವುದು ಸಂಸ್ಕೃತಿಯ ಒಂದು ಅಭಿವ್ಯಕ್ತಿ ಮಾಧ್ಯಮ. ಆದ್ದರಿಂದ ಸಾಹಿತ್ಯದ ಮೂಲಕ ಕಲಿಯುವ ಭಾಷೆ, ಒಬ್ಬ ವ್ಯಕ್ತಿಯನ್ನು ಆ ಸಂಸ್ಕೃತಿಯ ಹಲವು ಆಯಾಮಗಳನ್ನು ಪರಿಚಯಿಸುತ್ತದೆ. ಸಾಹಿತ್ಯ ಕೃತಿಗಳು ಜೀವನ, ಬದುಕಿನ ಚಿತ್ರಣ ಕಟ್ಟಿಕೊಡುತ್ತದೆ. ಉದಾಹರಣೆಗೆ ಕುವೆಂಪು ಶಿವಮೊಗ್ಗ ಜಿಲ್ಲೆಯ ಮಲೆನಾಡಿನ ಸಂಸ್ಕೃತಿಯ ಅರಿವನ್ನು, ಮುಸ್ಲಿಂ ಸಂಸ್ಕೃತಿಯ ಹಲವು ವಿಚಾರಗಳನ್ನು, ಮುಸ್ಲಿಂ ಬರಹಗಾರರು, ದಲಿತರ ಬದುಕು, ಶೋಷಣೆಯ ಬಗ್ಗೆ ದೇವನೂರು ಮಹಾದೇವರು ಮುಂತಾದ ಲೇಖಕರ ಪ್ರಬಂಧ, ಕಾದಂಬರಿಗಳಿಂದ ಹಾಗೂ ಚಿನುವಾ ಅಚಿಬೆ ಅವರ ನೈಜೀರಿಯಾದ ಬುಡಕಟ್ಟಿನ ಜನರ ಸಂಸ್ಕೃತಿಯ ಬದುಕು 'ಥಿಂಗ್ಸ್ ಫಾಲ್ ಅಪಾರ್ಟ್' ಕಾದಂಬರಿಯ ಮೂಲಕ ಕಣ್ಣಿಗೆ ಕಟ್ಟುತ್ತದೆ. ಈ ರೀತಿಯಾಗಿ ಸಾಹಿತ್ಯ ಸಾಂಸ್ಕೃತಿಕ ಅರಿವನ್ನು ಮೂಡಿಸುತ್ತದೆ.

**ಭಾಷೆಯಲ್ಲಿ ಸಾಹಿತ್ಯದ ಮೌಲ್ಯ ಪ್ರಜ್ಞೆ:**

ಪ್ರಸ್ತುತ ದಿನಗಳಲ್ಲಿ ಶಿಕ್ಷಣವು ಎದುರಿಸುತ್ತಿರುವ ಬಹುದೊಡ್ಡ ಸವಾಲು ಎಂದರೆ ಶಿಕ್ಷಣದ ಬಗೆಗಿನ ಗುರಿ ಮತ್ತು ಅರಿವಿನ ಕೊರತೆ. ಮನುಷ್ಯನ ಮೌಲ್ಯಗಳ ಬಗೆಗಿನ ಅರಿವನ್ನು ಮತ್ತು ಜೀವನ ಮೌಲ್ಯಗಳನ್ನು ತಿಳಿಸಿಕೊಡುತ್ತವೆ. ಸಾಹಿತ್ಯ ಮೌಲ್ಯಗಳು ಒಂದು ಆಧಾರವಾಗಬಲ್ಲವು. ಜೀವನದ ವ್ಯಕ್ತಿ ಬದುಕನ್ನು ಶ್ರೀಮಂತಗೊಳಿಸುವ ಅನೇಕ ಸಂಗತಿಗಳಿಂದ ದೂರವಾಗಬಹುದು. ಸಾಹಿತ್ಯದ ಮುಖಾಂತರ ಕಲೆ, ಸಾಹಿತ್ಯ, ಕ್ರೀಡೆ, ಸಂಗೀತ ಇವುಗಳಿಂದ ವಂಚಿತನಾಗಬಹುದು. ನಮ್ಮ ಬದುಕನ್ನು ಶ್ರೀಮಂತಗೊಳಿಸುವ ಮೌಲ್ಯಗಳನ್ನು ಅರಿಯುವ ದಿಕ್ಕಿನಲ್ಲಿ ಸಾಹಿತ್ಯ

ಓದು ಉಪಯುಕ್ತವಾಗಿದೆ.

**ಪರಾಮರ್ಶನ ಗ್ರಂಥಗಳು:**


1. ವೆಂಕಟಸುಬ್ಬಯ್ಯ ಬಿ., (2011), ಸಾಹಿತ್ಯ ಮತ್ತು ಶಿಕ್ಷಣ, ಪ್ರಿಸ್ಮಾ ಬುಕ್ ಪ್ರಾ. ನಿ, ಬೆಂಗಳೂರು.
2. ಗೋಪಾಲಕೃಷ್ಣ ಅಡಿಗ, (2023), ಸಮಗ್ರ ಕಾವ್ಯ, ಸಪ್ನ ಬುಕ್ ಹೌಸ್, ಬೆಂಗಳೂರು.
3. ಕುವೆಂಪು, (2024), ಪಕ್ಷಿಕಾಶಿ, ಉದಯರವಿ ಪ್ರಕಾಶನ, ಮೈಸೂರು.
4. ಬೋಳುವಾರು ಮಹಮ್ಮದ ಕುಂಞ, (1991), ತಟ್ಟು ಚಪ್ಪಾಳೆ, ದಿವ್ಯಾ ಪ್ರಕಾಶನ, ಬೆಂಗಳೂರು.
5. ಶಿಕ್ಷಣ ಸಚಿವಾಲಯ, (2020), ರಾಷ್ಟ್ರೀಯ ಶಿಕ್ಷಣ ನೀತಿ 2020, ಭಾರತ ಸರ್ಕಾರ, ನವ ದೆಹಲಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.